C.C- 1072/2025

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 19.12.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀಮತಿ ಎನ್.ವಿ.ಎನ್ ರವರಿಂದಃ**

ಆರೋಪಿತನು ನನಗೆ ಸುಮಾರು 20 ವರ್ಷಗಳಿಂದ ಪರಿಚಯವಿದ್ದಾನೆ. ಆರೋಪಿತನೊಂದಿಗೆ ಸುಮಾರು 5 ವರ್ಷಗಳಿಂದ ನಾನು ಹಣಕಾಸಿನ ವ್ಯವಹಾರವನ್ನು ಮಾಡುತ್ತಿದ್ದೇನೆ. ನಾನು ಅಡಿಕೆ ವ್ಯಾಪಾರ ಮತ್ತು ವ್ಯವಸಾಯ ಮಾಡುತ್ತಿದ್ದೇನೆ. ಅಡಿಕೆ ವ್ಯಾಪಾರ ಮಾಡುವ ಬಗ್ಗೆ ನಾನು ಪರವಾನಗಿ ಪಡೆದಿದ್ದು, ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನನ್ನ ಹೆಸರಿಗೆ ಕೃಷಿ ಜಮೀನು ಇರುವ ಬಗ್ಗೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿಲ್ಲ. ನಾನು ಹಣಕಾಸಿನ ವ್ಯವಹಾರವನ್ನು ಬ್ಯಾಂಕಿನ ಮೂಲಕವೇ ಮಾಡುತ್ತಿದ್ದೇನೆ. ನನ್ನ ಅಡಿಕೆ ವ್ಯಾಪಾರದಿಂದ ನನಗೆ ಖರ್ಚು ಕಳೆದು ತಿಂಗಳಿಗೆ ಸುಮಾರು 1 ಲಕ್ಷ ಲಾಭ ಬರುತ್ತದೆ ಹಾಗೂ ಕೃಷಿಯಿಂದ ನನಗೆ ವಾರ್ಷಿಕ ಸುಮಾರು 25 ಲಕ್ಷ ರೂ. ಆದಾಯ ಇದೆ. ನನ್ನ ಆದಾಯಕ್ಕೆ ಸಂಬಂಧಪಟ್ಟಂತೆ ನಾನು ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

2025 ಜನವರಿ ಮೊದಲನೇ ವಾರದಲ್ಲಿ ಆರೋಪಿತನು ನನ್ನಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದಾನೆ. ಆರೋಪಿತನಿಗೆ 5 ಲಕ್ಷ ರೂ.ಗಳನ್ನು ಕೊಟ್ಟಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ತುಂಬಾ ಜನರೊಂದಿಗೆ ಅಡಿಕೆ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿ. ಅಡಿಕೆ ವ್ಯಾಪಾರ ಮಾಡುವಾಗ ಪ್ರತಿ ದಿನ ನಾನು ಇಂತಿಷ್ಟೇ ಬೆಲೆಗೆ ಅಡಿಕೆಯನ್ನು ಖರೀದಿ ಮತ್ತು ಮಾರಾಟ ಮಾಡುತ್ತೇನೆ ಎಂದು ನನಗೆ ನಿಖರವಾಗಿ ತಿಳಿದಿರುವುದಿಲ್ಲ ಎಂದರೆ ಸರಿ. ಪ್ರತಿ ದಿನ ನಾನು ಮಾಡುವ ಅಡಿಕೆ ವ್ಯಾಪಾರದ ಕುರಿತು ಪ್ರತ್ಯೇಕ ದಿನಚರಿಯನ್ನು ಬರೆಯುವುದಿಲ್ಲ. ಆದರೆ ರಶೀದಿಗಳು ಇವೆ. ಆರೋಪಿತನಿಗೆ ಹಣವನ್ನು ಕೊಟ್ಟಿದ್ದನ್ನು ನಾನು ಪುಸ್ತಕದಲ್ಲಿ ಬರೆದುಕೊಂಡಿಲ್ಲ.

ದಿನಾಂಕ 10.01.2025 ರಂದು 5 ಲಕ್ಷ ರೂ. ಹಣವನ್ನು ಆರೋಪಿತನಿಗೆ ಕೊಟ್ಟಿದ್ದಾಗಿ ನನ್ನ ದೂರು ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ನಾನು ಬ್ಯಾಂಕಿನ ವ್ಯವಹಾರ ಮಾಡುವ ಬಗ್ಗೆ ಚಲನ್ ಪುಸ್ತಕ ನನ್ನ ಬಳಿ ಇದೆ. ನಿಪಿ-1 ಅನ್ನು ಒಂದೇ ಬಾರಿ ನಗದೀಕರಣಕ್ಕೆ ಹಾಜರುಪಡಿಸಿದ್ದೇನೆ.ನನ್ನ ಸ್ವ ಇಚ್ಛಾ ಹೇಳಿಕೆಯಂತೆ ದಿನಾಂಕ 06.02.2025 ರಂದು ನನ್ನ ಖಾತೆ

ಇರುವ ಸಾಗರದ ಕರ್ನಾಟಕ ಬ್ಯಾಂಕಿನಲ್ಲಿ ನಿಪಿ–1 ರ ಚೆಕ್ ಅನ್ನು ಹಾಜರು ಪಡಿಸಿದಾಗ ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ತಿರಸ್ಕಾರಗೊಂಡು ದಿನಾಂಕ 07.02.2025 ರಂದು ಬ್ಯಾಂಕಿನ ಅಧಿಕಾರಿಗಳು ನನಗೆ ಹಿಂಬರಹ ನೀಡಿದ್ದಾರೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಸದರಿ ದಿನದಂದು ಯಾವ ಕಾರಣಕ್ಕೆ ಚೆಕ್ ಅನಾಧರಣವಾಗಿದೆ ಎಂದು ಬ್ಯಾಂಕಿನ ಅಧಿಕಾರಿಗಳ ಬಳಿ ದಾಖಲೆ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಬ್ಯಾಂಕಿನಿಂದ ತಂದು ಹಾಜರು ಪಡಿಸಬಲ್ಲೆ. ಕರ್ನಾಟಕ ಬ್ಯಾಂಕ್ ಹಾಗೂ ಯುನಿಯನ್ ಬ್ಯಾಂಕ್ ಸಾಗರ ಶಾಖೆಗಳಲ್ಲಿ ಒಟ್ಟು ಎರಡು ಖಾತೆಗಳನ್ನು ಹೊಂದಿದ್ದೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.